ಕರ್ನಾಟಕ ಸರ್ಕಾರ

ಸಂಖ್ಯೆ: ಆಇ (ವಿ) 81 ಪಿಇಎನ್ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 03.09.2012

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು-1.

ಇವರಿಗೆ:

ನಿರ್ದೇಶಕರು,
ಖಜಾನೆ ಇಲಾಖೆ,
ವಿ.ವಿ. ಗೋಪುರ,
ಬೆಂಗಳೂರು -1.

ಮಾನ್ಯರೇ,

ವಿಷಯ: ರಾಜ್ಯ ಸರ್ಕಾರಿ ನಿವೃತ್ತಿದಾರರ/ಕುಟುಂಬ ನಿವೃತ್ತಿದಾರರ ನಿವೃತ್ತಿ ವೇತನವನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ: ಖಜಾನೆ ನಿರ್ದೇಶಕರ ಪತ್ರ ಸಂಖ್ಯೆ: TRY/Pension-40/2012-2013 ದಿನಾಂಕ: 19.7.2012.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ಆದೇಶ ಸಂಖ್ಯೆ: ಆಇ(ವಿ) 81 ಪಿಇಎನ್ 2012 ದಿನಾಂಕ: 3.5.2012ರಲ್ಲಿ ರಾಜ್ಯ ಸರ್ಕಾರದ ನಿವೃತ್ತಿದಾರರು/ಕುಟುಂಬ ನಿವೃತ್ತಿದಾರರ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಪರಿಷ್ಕರಿಸಿ ಆದೇಶವನ್ನು ಹೊರಡಿಸಿರುತ್ತದೆ ಹಾಗೂ ದಿನಾಂಕ: 13.10.2010ರ ಆದೇಶ ಸಂಖ್ಯೆ: ಆಇ 27 ಪಿಇಎನ್ 2007ರಲ್ಲಿ ಸರ್ಕಾರವು 80ರಿಂದ 85, 85 ರಿಂದ 90 ಮತ್ತು 90 ವಯಸ್ಸು ಮೀರಿದ ನಿವೃತ್ತಿದಾರರ/ಕುಟುಂಬ ನಿವೃತ್ತಿದಾರರ ಮೂಲ ನಿವೃತ್ತಿ ವೇತನ\ಕುಟುಂಬ ನಿವೃತ್ತಿ ವೇತನವನ್ನು ಶೇಕಡ 20ರಷ್ಟು, 30 ರಷ್ಟು ಮತ್ತು 50ರಷ್ಟು ಹೆಚ್ಚಳ ಮಾಡಿರುತ್ತದೆ. ದಿನಾಂಕ: 3.5.2012ರ ಆದೇಶದಲ್ಲಿ ನಿವೃತ್ತಿ ವೇತನ /ಕುಟುಂಬ ನಿವೃತ್ತಿ ವೇತನವನ್ನು ಪರಿಷ್ಕರಿಸಿರುವುದರಿಂದ 80, 85 ಮತ್ತು 90 ವರ್ಷ ಪೂರೈಸಿರುವ ಪಿಂಚಣಿದಾರರಿಗೆ ಶೇಕಡ 20,30 ಮತ್ತು 50 ರಷ್ಟು ಹೆಚ್ಚುವರಿ ಪಿಂಚಣಿಯನ್ನು ಯಾವ ರೀತಿ ಪರಿಗಣಿಸಬೇಕೆಂಬ ಬಗ್ಗೆ ಖಜಾನೆ ನಿರ್ದೇಶಕರು ಸ್ಪಷ್ಟೀಕರಣವನ್ನು ಕೋರಿರುತ್ತಾರೆ ಹಾಗೂ ಈ ವಿಷಯದ ಬಗ್ಗೆ ಹಲವಾರು ಪಿಂಚಣಿದಾರರು ಹಾಗೂ ಬ್ಯಾಂಕುಗಳಿಂದ ಸಹ ಸ್ಪಷ್ಟೀಕರಣವನ್ನು ಕೋರಲಾಗಿರುತ್ತದೆ.

ಈ ಬಗ್ಗೆ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಿದೆ:

(1) ದಿನಾಂಕ: 3.5.2012ರ ಆದೇಶದಲ್ಲಿನ ಅನುಬಂಧದನ್ವಯ ದಿನಾಂಕ: 31.3.2012ರಂದು ಇದ್ದಂತಹ ಮೂಲ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪರಿಷ್ಕರಿಸಬೇಕಾಗುತ್ತದೆ. ಪರಿಷ್ಕರಿಸಿದ ಪಿಂಚಣಿ/ಕುಟುಂಬ ಪಿಂಚಣಿಯ ಆಧಾರದ ಮೇಲೆ ದಿನಾಂಕ: 13.10.2010ರ ಆದೇಶದಲ್ಲಿ ಮಂಜೂರು ಮಾಡಿರುವ ಶೇಕಡ 20,30 ಮತ್ತು 50ರಂತೆ ಪಿಂಚಣಿಯನ್ನು ಹೆಚ್ಚಿಸಿ ಪರಿಷ್ಕರಿಸಬೇಕಾಗುತ್ತದೆ.

(2) ಈ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪ್ರತ್ಯೇಕ ಭಾಗವಾಗಿ ತೋರಿಸತಕ್ಕದ್ದು.

. . . 2.

Office of the Director of
Treasuries, Bangalore.
Received..................Covers
contents not known.
7/9/12
Accountant

(3) ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿಯನ್ನು ಕಾಲಕಾಲಕ್ಕೆ ನೀಡಲಾಗುವ ತುಟ್ಟಿಭತ್ಯೆಯ ಲೆಕ್ಕಾಚಾರಕ್ಕೆ ಪರಿಗಣಿಸತಕ್ಕದ್ದು.

(4) ಮೇಲ್ಕಂಡಂತೆ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪರಿಷ್ಕರಿಸಲು ಹಾಗೂ ಹೆಚ್ಚಿಸಲು ನೀಡಿರುವ ಸೂಚನೆಗಳನ್ನು ಸಂಬಂಧಪಟ್ಟ ಎಲ್ಲಾ ಪಿಂಚಣಿ ಪಾವತಿ ಖಜಾನಾಧಿಕಾರಿ/ಪಿಂಚಣಿ ಪಾವತಿ ಬ್ಯಾಂಕುಗಳ ಗಮನಕ್ಕೆ ತರುವುದು.

(5) ಈ ಬಗ್ಗೆ ವಿವರಣಾತ್ಮಕ ಉದಾಹರಣೆಗಳನ್ನು ಸಹ ಅನುಬಂಧದಲ್ಲಿ ತೋರಿಸಲಾಗಿದೆ.

ತಮ್ಮ ನಂಬುಗೆಯ

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಪತ್ರ ಸಂಖ್ಯೆ: ಆಇ(ವಿ) 81 ಪಿಇಎನ್ 2012 ದಿನಾಂಕ 03.09.2012ಕ್ಕೆ

## ಅನುಬಂಧ

| | | |
|---|---|---|
| 1 | **ನಿವೃತ್ತಿದಾರ/ಕುಟುಂಬ ನಿವೃತ್ತಿದಾರ ದಿನಾಂಕ:1.5.2008 ರಂದು 80 ವರ್ಷ ಪೂರ್ತೈಸಿದ್ದಾರೆಂದು ಅರ್ಥೈಸಿಕೊಂಡಲ್ಲಿ** | |
| | ದಿನಾಂಕ:1.5.2008ರಂದು ಇದ್ದ ಅವರ ಮೂಲ ಪಿಂಚಣಿ/ಕುಟುಂಬ ಪಿಂಚಣಿ | ಮೂಲ ಪಿಂಚಣಿ ರೂ.6,000 |
| | ದಿನಾಂಕ: 13.10.2010ರ ಆದೇಶದ ಪ್ರಕಾರ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ ಶೇ.20ರಷ್ಟು ಹೆಚ್ಚಳ | ಹೆಚ್ಚುವರಿ ಪಿಂಚಣಿ ರೂ.1,200 |
| | ದಿನಾಂಕ:3.5.2012ರ ಆದೇಶದನ್ವಯ ದಿನಾಂಕ: 1.4.2012ರಿಂದ ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿ | ರೂ.12,000 |
| | ದಿನಾಂಕ:13.10.2010ರ ಆದೇಶದ ಪ್ರಕಾರ ಪರಿಷ್ಕೃತ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ | ರೂ.2,400 |
| | ದಿನಾಂಕ: 1.4.2012ರಂದು ಇದ್ದಂತೆ ಒಟ್ಟು ಪಿಂಚಣಿ/ಕುಟುಂಬ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿ | ರೂ.14,400 |
| | ಕಾಲಕಾಲಕ್ಕೆ ನೀಡಲಾಗುವ ತುಟ್ಟಿಭತ್ಯೆಗೆ ಲೆಕ್ಕ ಹಾಕಬೇಕಾದ ಮೊತ್ತ | ರೂ.14,400 |
| 2 | **ಈ ನಿವೃತ್ತಿದಾರ/ಕುಟುಂಬ ನಿವೃತ್ತಿದಾರ ದಿನಾಂಕ:1.5.2013 ರಂದು 85 ವರ್ಷ ವಯಸ್ಸನ್ನು ಪೂರ್ತೈಸಿದಾಗ** | |
| | ದಿನಾಂಕ: 3.5.2012ರ ಆದೇಶದ ಪ್ರಕಾರ ದಿನಾಂಕ: 1.4.2012ರಂದು ಅವರ ಮೂಲ ಪಿಂಚಣಿ/ಕುಟುಂಬ ಪಿಂಚಣಿ | ರೂ.12,000 |
| | ದಿನಾಂಕ: 13.10.2010ರ ಆದೇಶದ ಪ್ರಕಾರ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ ಶೇ. 30ರಷ್ಟು ಹೆಚ್ಚಳ<br>(ಅ) ಈಗಾಗಲೇ ನೀಡಿರುವ ಶೇಕಡ 20ರಷ್ಟು ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ<br>(ಆ) ನೀಡಬೇಕಾದ ಶೇಕಡ 10ರಷ್ಟು ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ: 1.5.2013ರಿಂದ ಜಾರಿಗೆ ಬರುವಂತೆ<br>ಪರಿಷ್ಕೃತ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ (= ಅ+ಆ) | ರೂ.2,400<br>ರೂ.1,200<br>ರೂ.3,600 |
| | ದಿನಾಂಕ: 3.5.2012ರ ಆದೇಶದ ಪ್ರಕಾರ ಇವರ ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿ | ರೂ.12,000 |
| | ಪರಿಷ್ಕೃತ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ | ರೂ. 3,600 |
| | ಒಟ್ಟು ಪಿಂಚಣಿ/ಕುಟುಂಬ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿ | ರೂ, 15,600 |
| | ಕಾಲಕಾಲಕ್ಕೆ ನೀಡಲಾಗುವ ತುಟ್ಟಿಭತ್ಯೆಗೆ ಲೆಕ್ಕ ಹಾಕಬೇಕಾದ ಮೊತ್ತ | ರೂ, 15,600 |
| 3. | **ಇದೇ ನಿವೃತ್ತಿದಾರ/ಕುಟುಂಬ ನಿವೃತ್ತಿದಾರ 90 ವರ್ಷ ಪೂರ್ತೈಸುವ ದಿನಾಂಕ: 1.5.2018 ರಂದು 90 ವರ್ಷ ವಯಸ್ಸು ಪೂರ್ತೈಸಿದಾಗ** | |
| | ದಿನಾಂಕ: 3.5.2012ರ ಆದೇಶದ ಪ್ರಕಾರ ದಿನಾಂಕ: 1.4.2012ರಂದು ಅವರ ಮೂಲ ಪಿಂಚಣಿ/ಕುಟುಂಬ ಪಿಂಚಣಿ | ರೂ. 12,000 |
| | ದಿನಾಂಕ: 13.10.2010ರ ಆದೇಶದ ಪ್ರಕಾರ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ ಶೇ. 50ರಷ್ಟು ಹೆಚ್ಚಳ<br>(ಅ) ಈಗಾಗಲೇ ನೀಡಿರುವ ಶೇಕಡ 30ರಷ್ಟು ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ<br>(ಆ) ನೀಡಬೇಕಾದ ಶೇಕಡ 20ರಷ್ಟು ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ ದಿನಾಂಕ: 1.5.2018ರಿಂದ ಜಾರಿಗೆ ಬರುವಂತೆ<br>ಪರಿಷ್ಕೃತ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ (= ಅ+ಆ) | ರೂ. 3,600<br>ರೂ. 2,400<br>ರೂ. 6,000 |
| | ದಿನಾಂಕ: 3.5.2012ರ ಆದೇಶದ ಪ್ರಕಾರ ಇವರ ಪರಿಷ್ಕೃತ ಮೂಲ ಪಿಂಚಣಿ/ಕುಟುಂಬ ಪಿಂಚಣಿ | ರೂ. 12,000 |
| | ಪರಿಷ್ಕೃತ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ | ರೂ. 6.000 |
| | ಒಟ್ಟು ಪಿಂಚಣಿ/ಕುಟುಂಬ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿ | ರೂ. 18,000 |
| | ಕಾಲಕಾಲಕ್ಕೆ ನೀಡಲಾಗುವ ತುಟ್ಟಿಭತ್ಯೆಗೆ ಲೆಕ್ಕ ಹಾಕಬೇಕಾದ ಮೊತ್ತ | ರೂ. 18,000 |